ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/12/2015-16. ದಿನಾಂಕ:12-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಲಂಬಾಣಿ ಚಂದ್ರನಾಯ್ಕ ತಂದೆ ಲೇಟ್ ಲಚುಮನಾಯ್ಕ<br>2)ಫಕ್ಕೀರಿಬಾಯಿ ಗಂಡ ಲಂಬಾಣಿ ಚಂದ್ರನಾಯ್ಕ<br>3)ದುರ್ಗ್ಯಾನಾಯ್ಕ ತಂದೆ ಲಂಬಾಣಿ ಚಂದ್ರನಾಯ್ಕ<br>ದೂಪದಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು | ಸೋಮ್ಲನಾಯ್ಕ ತಂದೆ ಚಂದ್ರನಾಯ್ಕ<br>ದೂಪದಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 323. ವಿಸ್ತೀರ್ಣ 6-37. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 323. ವಿಸ್ತೀರ್ಣ 6-37. ಎಕ್ರೆ ಜಮೀನನ್ನು ಸದರಿ ತಾಲೂಕು ದೂಪದಹಳ್ಳಿ ತಾಂಡದ ಲಂಬಾಣಿ ಚಂದ್ರನಾಯ್ಕ ತಂದೆ ಲೇಟ್ ಲಚುಮನಾಯ್ಕ ಇವರು ದಿನಾಂಕ 17-01-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ದೂಪದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 20-03-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ದೂಪದಹಳ್ಳಿ ತಾಂಡದ ಸೋಮ್ಲನಾಯ್ಕ ತಂದೆ ಚಂದ್ರನಾಯ್ಕ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 52/2014-15. ದಿನಾಂಕ 20-04-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-01-2016 ರಿಂದ 12-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ದೂಪದಹಳ್ಳಿ ಗ್ರಾಮದ ಸನಂ 323. ವಿಸ್ತೀರ್ಣ 6-37. ಎಕ್ರೆ ಜಮೀನು ನನ್ನ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ನಾವುಗಳು ದಿನಾಂಕ 17-01-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಅದರಂತೆ ಅಳತೆ ಮಾಡಿಸಿ 11ಇ.ನಕ್ಷೆಯನ್ನು ಪಡೆದಿರುತ್ತೇವೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜುರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿದ್ದು ಅವರು ಸದರಿ ವಿವಾದಿತ ಜಮೀನಿನಲ್ಲಿ ಪಾಲು ಇರುವುದರಿಂದ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದೆಂದು ತಕರಾರು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರಿಗೆ ನೋಟಿಸ್ಸು ಜಾರಿ ಮಾಡಲಾಗಿ ಅವರು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ಇದರಿಂದ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 323. ವಿಸ್ತೀರ್ಣ 6-37. ಎಕ್ರೆ ಜಮೀನಿನ ಅರ್ಜಿದಾರರು ವಿಚಾರಣೆಗೆ ಸತತ ಗೈರು ಹಾಜರಾಗಿರುವ ಕಾರಣ ಅವರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 12-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಲಂಬಾಣಿ ಚಂದ್ರನಾಯ್ಕ ತಂದೆ ಶೇಟ್ ಲಚುಮಾನಾಯ್ಕ. ಫಕ್ಕೀರಿಬಾಯಿ ಗಂಡ ಲಂಬಾಣಿ ಚಂದ್ರನಾಯ್ಕ ಹಾಗೂ ಇತರರು ದೂಪದಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಸೋಮ್ಲನಾಯ್ಕ ತಂದೆ ಚಂದ್ರನಾಯ್ಕ ದೂಪದಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.